ಬಜೆಟ್‌ನಲ್ಲಿ ಹಂಚಿಕೆಯಾಗಿರುವ ಅನುದಾನ

460(951); ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ);

ಅ) 2013–14ನೇ ಸಾಲಿನ ಬಜೆಟ್ಟಿನಲ್ಲಿ ಯಾವ್ಯಾವ ಇಲಾಖೆಗಳಿಗೆ ಯೋಜನೆ ಮತ್ತು ಯೋಜನೇತರ ಯೋಜನೆಯಡಿಯಲ್ಲಿ ಎಷ್ಟೆಷ್ಟು ಹಣವನ್ನು ಒದಗಿಸಲಾಗಿದೆ; (ಪ್ರತ್ಯೇಕ ಮಾಹಿತಿ ಒದಗಿಸುವುದು).

ಆ) ಹಾಗಾದರೆ, ಇಲ್ಲಿಯವರೆಗೆ ಯಾವ್ಯಾವ ಇಲಾಖೆಗೆ ಯೋಜನೆ ಮತ್ತು ಯೋಜನೇತರ ಯೋಜನೆಯಡಿಯಲ್ಲಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; (ಇಲಾಖಾವಾರು ಪ್ರತ್ಯೇಕ ಮಾಹಿತಿಯನ್ನು ಒದಗಿಸುವುದು

ಇ) ಬಿಡುಗಡೆ ಮಾಡಿರುವ ಹಣದಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ, ಇನ್ನೂ ಬಿಡುಗಡೆಯಾಗಬೇಕಾಗಿರುವ ಹಣವೆಷ್ಟು, ಯಾವ ಕಾಲಮಿತಿಯಲ್ಲಿ ಬಿಡುಗಡೆ ಮಾಡಲಾಗುವುದು; ಇಲಾಖಾವಾರು ಮಾಹಿತಿಯನ್ನು ಒದಗಿಸುವುದು)

ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) 2013–14ನೇ ಸಾಲಿನ ಆಯವ್ಯಯದಲ್ಲಿ ಯೋಜನೆ ಮತ್ತು ಯೋಜನೇತರ ಬಾಬ್ತಿನಡಿಯಲ್ಲಿ ವಿವಿಧ ಇಲಾಖೆಗಳಿಗೆ ಒದಗಿಸಲಾಗಿರುವ ಅನುದಾನದ ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಆ) ಅಕ್ಟೋಬರ್ 2013ರ ಅಂತ್ಯದವರೆಗೆ ವಿವಿಧ ಇಲಾಖೆಗಳಿಗೆ ಬಿಡುಗಡೆ ಮಾಡಿರುವ ಹಣದ ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಇ) ಅಕ್ಟೋಬರ್ 2013ರ ಅಂತ್ಯದವರೆಗೆ ಬಿಡುಗಡೆಯಾಗಿರುವ ಹಣದಲ್ಲಿ ಭರಿಸಲಾಗಿರುವ ವೆಚ್ಚ, ಇನ್ನೂ ಬಿಡುಗಡೆಯಾಗಬೇಕಾಗಿರುವ ಹಣದ ಇಲಾಖಾವಾರು ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ ಉಳಿಕೆ ಹಣವನ್ನು ಆಯಾ ಇಲಾಖೆಗಳು ಅವಶ್ಯಕತೆಗನುಗುಣವಾಗಿ ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಬಳಕೆ ಮಾಡಿಕೊಳ್ಳಲಾಗುವುದು.

ಅನುಬಂಧ

2013–14ನೇ ಸಾಲಿನ ಆಯವ್ಯಯದಲ್ಲಿ ಇಲಾಖಾವಾರು ಯೋಜನೆ ಮತ್ತು ಯೋಜನೇತರ ಬಾಬ್ತಿನಡಿಯಲ್ಲಿ ಒದಗಿಸಲಾಗಿರುವ ಅನುದಾನ, ಅಕ್ಟೋಬರ್ 2013ರ ಅಂತ್ಯದವರೆಗೆ ಬಿಡುಗಡೆಯಾದ ಹಣ, ವಾಸ್ತವಿಕ ವೆಚ್ಚ ಹಾಗೂ ಉಳಿಕೆ ಹಣದ ವಿವರಗಳು

₹ ಕೋಟಿಗಳಲ್ಲಿ

ಬೇಡಿಕೆ	ವಿವರ	ಯೋಜನೆ				ಯೋಜನೇತರ		
		ಅನುದಾನ	ಬಿಡುಗಡೆಯಾದ ಹಣ	ವೆಚ್ಚ	ಉಳಿಕೆ ಹಣ	ಅನುದಾನ	ವೆಚ್ಚ	ಉಳಿಕೆ
1	ಕೃಷಿ ಮತ್ತು ತೋಟಗಾರಿಕೆ	2581 33	1152 73	721 78	1428 60	906 38	556 66	349 72
2	ಪಶುಸಂಗೋಪನೆ ಮತ್ತು ಮೀನುಗಾರಿಕೆ	1459 21	672 34	526 71	786 87	358 99	243 22	115 77
3	ಆರ್ಥಿಕ	32 43	1 47	1 47	30 96	10469 02	5141	5328 02
4	ಸಿಬ್ಬಂದಿ ಮತ್ತು (ಆಡಳಿತ ಸುಧಾರಣೆ, ಇ-ಆಡಳಿತ ಸೇರಿದಂತೆ)	69 44	19 85	19 85	49 59	855 04	429 65	425 39
5	ಗೃಹ ಮತ್ತು ಸಾರಿಗೆ	960 55	606 65	595 25	353 90	4262 53	2039 71	2222 82
6	ಮೂಲ ಸೌಕರ್ಯ ಅಭಿವೃದ್ಧಿ	546 80	218 20	218 20	328 60	0	0	0
7	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್	3248 87	2427 77	1951 62	821 10	2107 84	907 98	1199 86
8	ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ	328 44	158 31	65 29	170 12	888 6	390	496 6
9	ಸಹಕಾರ	1963 76	1410 62	1409 35	553 13	164 33	85 35	78 98
10	ಸಮಾಜ ಕಲ್ಯಾಣ (ಹಿಂದುಳಿದ ವರ್ಗ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸೇರಿದಂತೆ)	3527 07	1636 68	964 7	1967 94	986 38	559 41	426 97
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	1357 10	558 87	459 04	[illegible]	926 13	450 65	[illegible]
12	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು	456 31	70 53	58 33	385 78	73 52	30 72	42 8

13	ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ	1 00	0 03	0 00	0 97	3503 82	1645 07	1858 75
14	ಕಂದಾಯ	1044 65	627 22	626 01	417 43	2702 93	1164 05	1538 88
15	ಮಾಹಿತಿ ತಂತ್ರಜ್ಞಾನ (ಜೈವಿಕ ತಂತ್ರಜ್ಞಾನ) ಸೇರಿದಂತೆ	133	59 47	50 08	73 53	9 63	1 01	8 62
16	ವಸತಿ	1260 61	1478 89	965 69	223 41	104 66	46 68	57 98
17	ಶಿಕ್ಷಣ	3874 94	1568 12	1346 99	2306 82	12429 03	8137 41	4291 62
18	ವಾಣಿಜ್ಯ ಮತ್ತು ಕೈಗಾರಿಕೆ	636 28	164 4	137 19	471 88	289 03	103 41	185 62
19	ನಗರಾಭಿವೃದ್ಧಿ	5289 40	1575 49	1285 95	3713 91	3906 25	1604 5	2301 75
20	ಲೋಕೋಪಯೋಗಿ	3972 84	1317 70	1442 84	2655 14	1883 76	787 26	1096 5
21	ಜಲಸಂಪನ್ಮೂಲ (ಸಣ್ಣ ನೀರಾವರಿ ಸೇರಿದಂತ)	8337 47	3431 16	3429 16	4906 31	910	588 65	321 35
22	(ವೈದ್ಯಕೀಯ ಶಿಕ್ಷಣ ಸೇರಿದಂತೆ)	1645 24	598 11	517 54	1047 13	2390 39	1253 63	1136 76
23	ಕಾರ್ಮಿಕ	289 59	137 37	102 12	152 21	208 13	116 14	91 99
24	ಇಂಧನ	5037 03	2096 24	2096 24	2940 79	5274 85	3003 96	2270 89
25	ಕನ್ನಡ ಮತ್ತು ಸಂಸ್ಕೃತಿ	212 76	31 33	31 33	181 43	55 65	29 88	25 77
26	ಯೋಜನಾ	388 45	620 11	150 42	247 31	56 15	27 73	28 42
27	ಕಾನೂನು	30 44	5 10	5 10	25 34	553 86	288 1	265 76
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನ	0	0	0	0 00	149	58 33	90 67
29	ಋಣಮೋಲುಸ್ತುವಾರಿ	0	0	0	0 00	14340 42	5285	9055 42
	ಒಟ್ಟು ರಾಜ್ಯ	**48685 00**	**22644 76**	**19178 25**	**27038 45**	**70 764 32**	**34975 16**	**35789 16**

ಮೂಲ

1 ಯೋಜನಾ ಬಾಬ್ತು–ಮಾಸಿಕ ಕಾರ್ಯಕ್ರಮ ಅನುಷ್ಠಾನ ವೇಳಾಪಟ್ಟಿ (MPIC) ವರದಿಗಳು

2 ಯೋಜನೇತರ ಬಾಬ್ತು–ಆರ್ಥಿಕ ಇಲಾಖೆ ಖಜಾನೆ ಸಂಪರ್ಕಜಾಲ ಮಾಹಿತಿ ವ್ಯವಸ್ಥೆ

ಸೂಚನೆ:

1. ಯೋಜನಾ ಬಾಬಿನಡಿ ಬಿಡುಗಡೆಯಾಗಿರುವ ಹಣದಲ್ಲಿ ಪ್ರಾರಂಭಿಕ ಶಿಲ್ಕು (ಹಿಂದಿನ ವರ್ಷದ ಉಳಿಕೆ ಹಣ) ಸೇರಿರುತ್ತದೆ

2 ಯೋಜನೇತರ ಬಾಬ್ತಿನಡಿ ಸಂಬಂಧಪಟ್ಟ ಇಲಾಖೆಗಳೇ ಬಿಡುಗಡೆ ಮಾಡಿಕೊಳ್ಳುವುದರಿಂದ ಮಾಹಿತಿಯೂ ಲಭ್ಯವಿರುವುದಿಲ್ಲ.